# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ. | : | 689 |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಜೇಂದ್ರ ರಾಜಣ್ಣ<br>(ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 21-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೆಶಿಪ್ ವತಿಯಿಂದ ನಿರ್ಮಾಣವಾಗಿರುವ ಮಧುಗಿರಿ ಮತ್ತು ಕೊರಟಗೆರೆ ಪಟ್ಟಣದ ಬೈಪಾಸ್ ರಸ್ತೆಯು ಅವೈಜ್ಞಾನಿಕವಾಗಿದ್ದು, ಬೈಪಾಸ್ ರಸ್ತೆಯಲ್ಲಿ ವಿದ್ಯುತ್ ದೀಪ, ಸೂಚನಾ ಫಲಕ, ಶಾಲಾ ಸೂಚನಾ ಫಲಕ, ವೈಜ್ಞಾನಿಕ ಹಂಪ್ಸ್‌ಗಳನ್ನು ಅಳವಡಿಸದಿರುವುದರಿಂದ ಬೈಪಾಸ್ ರಸ್ತೆಯಲ್ಲಿ ಅಪಘಾತಗಳ ಸಂಖ್ಯೆ ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; | ಯೋಜನಾ ಅನುಷ್ಠಾನ ಘಟಕ, ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ವತಿಯಿಂದ ಕೆಶಿಪ್-2 ರ ಯೋಜನೆಯಡಿ ವಿಶ್ವಬ್ಯಾಂಕ್ ಆರ್ಥಿಕ ನೆರವಿನೊಂದಿಗೆ ಡಬ್ಲ್ಯೂಎಪಿ-1 ಪ್ಯಾಕೇಜ್‌ರಡಿಯಲ್ಲಿ ಮಳವಳ್ಳಿ-ಪಾವಗಡ ರಸ್ತೆಯನ್ನು HAM (Hybrid Annuity Model) ಮದರಿಯಲ್ಲಿ ಅಭಿವೃದ್ಧಿಪಡಿಸಲಾಗಿರುತ್ತದೆ.<br>ಸದರಿ ಪ್ಯಾಕೇಜ್ ಕಾಮಗಾರಿ ಅಡಿಯಲ್ಲಿ ಮಧುಗಿರಿ ಮತ್ತು ಕೊರಟಗೆರೆ ಪಟ್ಟಣಗಳಿಗೆ ಬೈಪಾಸ್ ರಸ್ತೆಗಳನ್ನು IRC ಮಾನದಂಡಗಳನುಸಾರ ನಿರ್ಮಿಸಲಾಗಿದ್ದು, ಪ್ರಸ್ತುತ ನಿರ್ವಹಣಾ ಅವಧಿಯಲ್ಲಿರುತ್ತದೆ. ಸದರಿ ರಸ್ತೆಯಲ್ಲಿ ಅವಶ್ಯಕತೆ ಇರುವ ಕಡೆಗಳಲ್ಲಿ ವಿದ್ಯುತ್ ದೀಪ, ಸೂಚನಾ ಫಲಕ, ವೈಜ್ಞಾನಿಕ ಹಂಪ್ಸ್ ಮತ್ತು Raised Pedestrian Crossing ಗಳನ್ನು ಅಳವಡಿಸಲಾಗಿರುತ್ತದೆ. |
| ಆ) | ಬೈಪಾಸ್ ರಸ್ತೆಯಲ್ಲಿ ರೈತರಿಂದ ವಶಪಡಿಸಿಕೊಂಡಿರುವ ಜಮೀನುಗಳಿಗೆ ಸರ್ಕಾರದಿಂದ ಪರಿಹಾರದ ಮೊತ್ತವನ್ನು ಸಂಪೂರ್ಣವಾಗಿ ನೀಡಲಾಗಿದೆಯೇ; ಬಾಕಿಯಿದ್ದಲ್ಲಿ, ಮಾಹಿತಿ ನೀಡುವುದು; | ಮಧುಗಿರಿ ಬೈಪಾಸ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಸ್ವಾಧಿನಪಡಿಸಿಕೊಂಡಿರುವ ಒಟ್ಟು 202 ಸರ್ವೆ ನಂಬರ್‌ಗಳ ಜಮೀನುಗಳಲ್ಲಿ 143 ಸರ್ವೆ ನಂಬರ್‌ಗಳ ಜಮೀನಿನ ಭೂಮಾಲೀಕರಿಗೆ ಒಪ್ಪಂದದ ರೀತ್ಯಾ ಪರಿಹಾರ ಮೊತ್ತವನ್ನು ಪಾವತಿಸಲಾಗಿರುತ್ತದೆ. ಮಾಲೀಕತ್ವದ ದಾಖಲೆ ಸಲ್ಲಿಸದ/ಪರಿಹಾರ ಪಡೆಯಲು ನಿರಾಕರಿಸಿದ ಉಳಿದ 59 ಸರ್ವೆ ನಂಬರ್ ಜಮೀನುಗಳ ಪರಿಹಾರ ಮೊತ್ತವನ್ನು ಸಂಬಂಧಿಸಿದ ನ್ಯಾಯಾಲಯದಲ್ಲಿ ಠೇವಣಿಕರಿಸಲಾಗಿದ್ದು, ಈ ಪೈಕಿ 42 ಸರ್ವೆ ನಂಬರ್‌ಗಳ ಭೂಮಾಲೀಕರು ನ್ಯಾಯಾಲಯದಿಂದ ಪರಿಹಾರ ಮೊತ್ತವನ್ನು ಪಡೆದು ಕೊಂಡಿರುತ್ತಾರೆ. ಬಾಕಿ 17 ಸರ್ವೆ ನಂಬರ್‌ಗಳ ಭೂಮಾಲೀಕರು ನ್ಯಾಯಾಲಯದಿಂದ ಪರಿಹಾರ ಮೊತ್ತವನ್ನು ಪಡೆಯಬೇಕಾಗಿರುತ್ತದೆ.<br><br>ಕೊರಟಗೆರೆ ಬೈಪಾಸ್ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಸ್ವಾಧಿನಪಡಿಸಿಕೊಂಡಿರುವ ಒಟ್ಟು 118 ಸರ್ವೆ ನಂಬರ್‌ಗಳ ಜಮೀನುಗಳಲ್ಲಿ 59 ಸರ್ವೆ ನಂಬರ್‌ಗಳ ಜಮೀನಿನ ಭೂಮಾಲೀಕರಿಗೆ ಒಪ್ಪಂದದ ರೀತ್ಯಾ ಪರಿಹಾರ ಮೊತ್ತವನ್ನು ಪಾವತಿಸಲಾಗಿರುತ್ತದೆ. ಮಾಲೀಕತ್ವದ ದಾಖಲೆ ಸಲ್ಲಿಸದ/ಪರಿಹಾರ ಪಡೆಯಲು ನಿರಾಕರಿಸಿದ ಉಳಿದ 59 ಸರ್ವೆ ನಂಬರ್ ಜಮೀನುಗಳ ಪರಿಹಾರ ಮೊತ್ತವನ್ನು ಸಂಬಂಧಿಸಿದ |

| | | |
|---|---|---|
| | | ನ್ಯಾಯಾಲಯದಲ್ಲಿ ಠೇವಣಿಕರಿಸಲಾಗಿದ್ದು, ಈ ಪೈಕಿ 50 ಸರ್ವೆ ನಂಬರ್‌ಗಳ ಭೂಮಾಲೀಕರು ನ್ಯಾಯಾಲಯದಿಂದ ಪರಿಹಾರ ಮೊತ್ತವನ್ನು ಪಡೆದು ಕೊಂಡಿರುತ್ತಾರೆ. ಬಾಕಿ 09 ಸರ್ವೆ ನಂಬರ್‌ಗಳ ಭೂಮಾಲೀಕರು ನ್ಯಾಯಾಲಯದಿಂದ ಪರಿಹಾರ ಮೊತ್ತವನ್ನು ಪಡೆಯಬೇಕಾಗಿರುತ್ತದೆ. |
| ಇ) | ಮಧುಗಿರಿ ಮತ್ತು ಕೊರಟಗೆರೆ ಬೈಪಾಸ್ ರಸ್ತೆಯಲ್ಲಿ ರಸ್ತೆ ಸುರಕ್ಷತೆ ಹಿತದೃಷ್ಟಿಯಿಂದ ವಿದ್ಯುತ್ ದೀಪ, ಸೂಚನಾ ಫಲಕ ಹಾಗೂ ವೈಜ್ಞಾನಿಕ ಹಂಪ್ಸ್‌ಗಳನ್ನು ಅಳವಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ? | ಮಧುಗಿರಿ ಮತ್ತು ಕೊರಟಗೆರೆ ಬೈಪಾಸ್ ರಸ್ತೆಯಲ್ಲಿ ರಸ್ತೆ ಸುರಕ್ಷತೆ ಹಿತದೃಷ್ಟಿಯಿಂದ ಅವಶ್ಯಕತೆಯಿರುವ ಕಡೆಗಳಲ್ಲಿ ವಿದ್ಯುತ್ ದೀಪ, ಸೂಚನಾ ಫಲಕ, ವೈಜ್ಞಾನಿಕ ಹಂಪ್ಸ್ ಮತ್ತು Raised Pedestrian Crossing ಗಳನ್ನು ಅಳವಡಿಸಲಾಗಿರುತ್ತದೆ. |

ಸಂಖ್ಯೆ. ಲೋಇ E-47 ಇಎಪಿ 2024

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು